ಜಿಲ್ಲಾ ಪಂಚಾಯ್ತಿ ಹಣ ಉಪಯೋಗಿಸದೆ ವಾಪಸ್ ಕಳಿಸಿರುವುದು.

169(298)

ಶ್ರೀ ಗುರುಸ್ವಾಮಿ ಸಿ.(ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2000-2001ನೇ ಸಾಲಿನ ಬಿಡುಗಡೆಯಾದ ಜಿಲ್ಲಾ ಪಂಚಾಯ್ತಿಗೆ ಸಂಬಂಧಪಟ್ಟ ಹಣವು ಉಪಯೋಗವಾಗದೆ ಸರ್ಕಾರಕ್ಕೆ ಹಿಂತಿರುಗಿಸಿರುವ ಸಂಗತಿ ನಿಜವಲ್ಲವೆ?

ಆ. ನಿಜವಿದ್ದಲ್ಲಿ, ಹಣ ಸದುಪಯೋಗವಾಗದಿರಲು ಕಾರಣಗಳೇನು? ಇದಕ್ಕೆ ತಪ್ಪಿತಸ್ಥರು ಅಧಿಕಾರಿಗಳೆಂದು ಗುರುತಿಸಲಾಗಿದೆಯೆ? ಕಾರಣರಾದ ಅಧಿಕಾರಿ ಯಾರು?

ಇ. ಹಿಂದಿರುಗಿ ಕಳುಹಿಸಿರುವ ಹಣವನ್ನು ವಾಪಸ್ಸು ಪಡೆಯಲು ಸರ್ಕಾರ ಪರಿಗಣಿಸುವುದೆ?

ಈ. ಹಣ ಉಪಯೋಗ ಪಡಿಸಿಕೊಳ್ಳದ ಅಧಿಕಾರಿ ವಿರುದ್ಧ ಯಾವ ಕ್ರಮ ಜರುಗಿಸಲಾಗುವುದು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ. 2000-2001ನೇ ಆರ್ಥಿಕ ಸಾಲು ಇನ್ನೂ ಮುಗಿಯದಿರುವುದರಿಂದ, ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಯಾದ ಹಣ ಉಪಯೋಗವಾಗದೆ ಸರ್ಕಾರಕ್ಕೆ ಹಿಂತಿರಿಗಿಸಿರುವ ಪ್ರಕರಣಗಳು ಇರುವುದಿಲ್ಲ.

ಆ. ಕಾರಣ, ಪ್ರಶ್ನೆ ಉದ್ಭವಿಸುವುದಿಲ್ಲ.

ಇ. -ಅದೇ-

ಈ. -ಅದೇ-

ವಿಶ್ವಬ್ಯಾಂಕ್ ನೆರವಿನಿಂದ ಕುಡಿಯುವ ನೀರಿನ ಯೋಜನೆ

170(427)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಕ್ಲಾಡಿ ಗ್ರಾಮದಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕುಡಿಯುವ ನೀರಿನ ಯೋಜನೆಯಲ್ಲಿ ಟ್ಯಾಂಕ್ ನಿರ್ಮಾಣಗೊಂಡು ಉದ್ಘಾಟನೆಯಾಗಿದ್ದು ಯಾವುದೇ ಪೈಪ್‌ಲೈನ್ ಅಳವಡಿಸಿಲ್ಲದೆ ನೀರಿನ ಸರಬರಾಜು ಆಗುತ್ತಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

2) ಈ ಬಗ್ಗೆ ಸರಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

1) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಕ್ಲಾಡಿ ಗ್ರಾಮದಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ 1 ಲಕ್ಷ ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್‌ನ್ನು ರಚಿಸಲಾಗಿದ್ದು, ನೀರಿನ ವಿತರಣೆಗೆ 8135.40 ಮೀಟರ್ ಉದ್ದದ ವಿತರಣಾ ಪೈಪುಗಳನ್ನು ಅಳವಡಿಸಲಾಗಿದೆ. ಏರು ಕೊಳವೆಯಲ್ಲಿ (ರೈಸಿಂಗ್ ಮೈನ್) ಕಂಡು ಬಂದಿದ್ದ ನ್ಯೂನತೆಯನ್ನು ಸರಿಪಡಿಸಿ ಟ್ಯಾಂಕ್‌ಗೆ ನೀರನ್ನು ತುಂಬಿಸಿ ವಿತರಣಾ ಕೊಳವೆಯ ಮೂಲಕ ನೀರನ್ನು ಹರಿಸಿ, ದಿನಾಂಕ: 30-8-2000ದಂದು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗೆ ಈ ಯೋಜನೆಯನ್ನು ಹಸ್ತಾಂತರಿಸಲಾಗಿದೆ.

2) ಮೇಲ್ಕಾಣಿಸಿದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಬೈಂದೂರು ಕ್ಷೇತ್ರದಲ್ಲಿರುವ ಆರೋಗ್ಯ ಕೇಂದ್ರಗಳು.

172(429)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಬೈಂದೂರಿಗೆ ಈ ಹಿಂದೆ 1994-95ನೇ ಇಸವಿಯಲ್ಲಿ ಸಮುದಾಯ ಆರೋಗ್ಯ